"ಮುಖಗವಸು ಧರಿಸಿ, ಸ್ಯಾನಿಟೈಸರ್ ಬಳಸಿ" "ಕಡ್ಡಾಯವಾಗಿ ಸಾಮಾಜಿಕ ಅಂತರ ಕಾಪಾಡಿ"

"Diamond Jubilee Year 1949-2009"
"ವಜ್ರ ಮಹೋತ್ಸವ ವರ್ಷ 1949-2009"

# ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ
# KARNATAK UNIVERSITY DHARWAD
ಸಿಬ್ಬಂದಿ ಹಾಗೂ ಆಡಳಿತ ಸುಧಾರಣಾ ವಿಭಾಗ

**D.P.A.R.**

75 ಸ್ವಾತಂತ್ರ್ಯದ ಅಮೃತ ಮಹೋತ್ಸವ

ಪಾವಟೆನಗರ, ಧಾರವಾಡ.
ದೂರವಾಣಿ ಸಂ.0836-2215349
Website : www.kud.ac.in

ನಂ.ಕವಿವಿ/ಸಿಆಸುವಿ/ಶಿಕ್ಷಕೇತರ/ಜಾಹೀರಾತು/10/2023/1530 ದಿನಾಂಕ: 26 OCT 2023

## ಬ್ಯಾಕ್‌ಲಾಗ್ ಹುದ್ದೆಗಳ ನೇಮಕಾತಿ ಅಧಿಸೂಚನೆ

ವಿಷಯ : ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಶಿಕ್ಷಕೇತರ ಬ್ಯಾಕಲಾಗ್ ಹುದ್ದೆಗಳಿಗೆ ಅರ್ಜಿ ಅಹ್ವಾನಿಸಿದ ಕುರಿತು.

ಉಲ್ಲೇಖ: 1) ಸರ್ಕಾರದ ಅಧಿಸೂಚನೆ ಸಂಖ್ಯೆ ಡಿಪಿಎಆರ್ 13 ಎಸ್‌ಬಿಸಿ 2001 ದಿನಾಂಕ : 21.11.2011.

2) ಕರ್ನಾಟಕ ವಿಶ್ವವಿದ್ಯಾಲಯದ ಪ್ರಸ್ತುತ ವೃಂದ ಮತ್ತು ನೇಮಕಾತಿ ಅನುಶಾಸನ

3) ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ಇವರ ಪತ್ರ ಸಂ.ಸಕಇ/ಬಿ ಅ ಆ್ಯಂಡ್ ಆರ್/ತಸ/ಸಿಆರ್6/06-07 ದಿನಾಂಕ : 29.05.2006.

4) ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ಇವರ ಪತ್ರ ಸಂ.ಸಕಇ/ಬಿ ಅ ಆ್ಯಂಡ್ ಆರ್/ತಸ/ಸಿಆರ್ 6/06-07, ದಿನಾಂಕ : 20.07.2006.

5) ಉನ್ನತ ಶಿಕ್ಷಣ ಇಲಾಖೆಯ ಅನುಮೋದನೆ ನೀಡಿದ ಪತ್ರ ಸಂಖ್ಯೆ ಇಡಿ 399 ಯುಆರ್‌ಸಿ 2022 ದಿನಾಂಕ : 10.02.2023.

6) ಘನತೆವೆತ್ತ ಕುಲಾಧಿಪತಿಗಳ ಅನುಮೋದನೆ ಪತ್ರ ಸಂಂಖ್ಯೆ GS 9 KUM 2023 ದಿನಾಂಕ: 19.07.2023.

7) Syndicate Res. No. 11 Dated : 02.09.2023.

8) ಕುಲಪತಿಗಳ ಅನುಮೋದನೆ ದಿನಾಂಕ: 17.10.2023

---

ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ವಿವಿಧ ವಿಭಾಗಗಳಲ್ಲಿನ ಶಿಕ್ಷಕೇತರ ಬ್ಯಾಕಲಾಗ್ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಅಹ್ವಾನಿಸಲಾಗಿದೆ. ಆಸಕ್ತಿಯಿರುವ ಅರ್ಹ ಅಭ್ಯರ್ಥಿಗಳು ಅರ್ಜಿ ನಮೂನೆಯ 4 ಸೆಟ್ಟಗಳನ್ನು ಸಂಪೂರ್ಣವಾಗಿ ಭರ್ತಿ ಮಾಡಿ ನಿಗದಿತ ಅವಧಿಯೊಳಗಾಗಿ ಅರ್ಜಿಗಳನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಬಹುದು. ಹುದ್ದೆಗಳ ವಿವರ ಹಾಗೂ ಅರ್ಜಿ ಸಲ್ಲಿಸುವ ವಿಧಾನದ ಸಂಪೂರ್ಣ ವಿವರ ಈ ಕೆಳಗಿನಂತೆ ಇರುತ್ತದೆ.

1) <u>ಅರ್ಜಿ ನಮೂನೆ</u> :

ಅರ್ಜಿ ಸಲ್ಲಿಸಲು ಆಸಕ್ತಿ ಹೊಂದಿರುವ ಅಭ್ಯರ್ಥಿಗಳು ಅರ್ಜಿ ನಮೂನೆಗಳನ್ನು ವಿಶ್ವವಿದ್ಯಾಲಯದ ಅಂತರ್ಜಾಲ www.kud.ac.in ನ ನೋಟಿಫಿಕೇಷನ್ ಸೆಗ್ಮೆಂಟ್‌ದಿಂದ ಡೌನಲೋಡ್ ಮಾಡಿಕೊಳ್ಳುವುದು. ಹೆಚ್ಚಿನ ಮಾಹಿತಿಯನ್ನು ದೂರವಾಣಿ ಸಂಖ್ಯೆ 0836-2215349 ಕ್ಕೆ ಕಚೇರಿ ವೇಳೆಯಲ್ಲಿ ಕರೆ ಮಾಡಿ ಪಡೆದುಕೊಳ್ಳಬಹುದಾಗಿರುತ್ತದೆ.

2) <u>ಅರ್ಜಿ ಶುಲ್ಕ ಮತ್ತು ಸಂಸ್ಕರಣಾ ಶುಲ್ಕ:</u>

ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಅರ್ಜಿ ಶುಲ್ಕ ಮತ್ತು ಸಂಸ್ಕರಣಾ ಶುಲ್ಕವನ್ನೊಳಗೊಂಡು ರೂ.700/- ಗಳನ್ನು ಸಂದಾಯ ಮಾಡಬೇಕಾಗುವುದು. ಒಂದಕ್ಕಿಂತ ಹೆಚ್ಚಿನ ಹುದ್ದೆಗೆ ಅರ್ಜಿ ಸಲ್ಲಿಸಬಯಸುವ ಅಭ್ಯರ್ಥಿಗಳು ಪ್ರತಿ ಅರ್ಜಿಯೊಂದಿಗೆ ಪ್ರತ್ಯೇಕವಾಗಿ ಅರ್ಜಿ ಶುಲ್ಕ ಮತ್ತು ಸಂಸ್ಕರಣಾ ಶುಲ್ಕವನ್ನು ಭರಿಸಬೇಕು.

3) <u>ಶುಲ್ಕ ಸಂದಾಯ ಮಾಡುವ ವಿಧಾನ:</u>

ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ತಮ್ಮ ಅರ್ಜಿಯೊಂದಿಗೆ ರಾಷ್ಟ್ರೀಕೃತ ಬ್ಯಾಂಕ್‌ನಿಂದ ಪಡೆದುಕೊಂಡ ಅರ್ಜಿ ಮೊತ್ತ ಹಾಗೂ ಸಂಸ್ಕರಣಾ ಶುಲ್ಕನೊಳಗೊಂಡು (Application Fee and Processing Fee) ಮೌಲ್ಯದ ಡಿಮ್ಯಾಂಡ್ ಡ್ರಾಫ್ಟ್ (ಡಿ.ಡಿ.) ಅನ್ನು Finance Officer, K.U. Dharwad ಇವರ ಹೆಸರಿನಲ್ಲಿ ಪಡೆದುಕೊಂಡು ಸಲ್ಲಿಸಬೇಕು. ಅಥವಾ ವಿಶ್ವವಿದ್ಯಾಲಯದ ವೆಬ್‌ಸೈಟ್ www.kud.ac.in ಕ್ಕೆ ಹೋಗಿ Online Fee Payment ಅಂಕಣದಲ್ಲಿ ಮೊದಲನೇಯ ಭಾಗ Karnatak University Fee (State Bank of India) ಅನ್ನು ಕ್ಲಿಕ್ಕಿಸಿ Educational Institutions ಅನ್ನು ಕ್ಲಿಕ್ ಮಾಡಿ ಅದರಲ್ಲಿ ಕರ್ನಾಟಕ ರಾಜ್ಯವನ್ನು ಆಯ್ಕೆ ಮಾಡಿ ಅದರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಅನ್ನು ಕ್ಲಿಕ್ ಮಾಡಿ 417 – Miscellaneous Receipt-General ಅನ್ನು ಆಯ್ಕೆ ಮಾಡಿ ಅದರಲ್ಲಿ ಅಭ್ಯರ್ಥಿಯ ಅಗತ್ಯ ವಿವರಗಳನ್ನು ನಮೂದಿಸಿದ ನಂತರ ಸದರ ವೇತನ ಪಾವತಿಯನ್ನು ಪೂರ್ಣಗೊಳಿಸಿ ಅದರ ಪ್ರತಿಯನ್ನು ಪ್ರಿಂಟ್ ಪಡೆದುಕೊಂಡು ಅರ್ಜಿಯೊಂದಿಗೆ ಸಲ್ಲಿಸುವುದು.

**4) ಜಾತಿ ಪ್ರಮಾಣ ಪತ್ರ:**

ಅರ್ಜಿ ಸಲ್ಲಿಸಲು ಇಚ್ಛಿಸುವ ಅಭ್ಯರ್ಥಿಗಳು ತಮ್ಮ ಅರ್ಜಿಯೊಂದಿಗೆ ಸಕ್ಷಮ ಪ್ರಾಧಿಕಾರದಿಂದ ಪಡೆದುಕೊಂಡಿರುವ ಇತ್ತೀಚಿನ ಜಾತಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಲಗತ್ತಿಸುವುದು. ಅಭ್ಯರ್ಥಿ ವಾಸಿಸುವ ಸ್ಥಳ ಒಳಪಡುವ ಪ್ರದೇಶದ ತಹಶೀಲ್ದಾರರನ್ನು ಜಾತಿ ಪ್ರಮಾಣ ಪತ್ರ ನೀಡುವ ಸಕ್ಷಮ ಪ್ರಾಧಿಕಾರ ಎಂದು ಪರಿಗಣಿಸಲಾಗುವುದು. ಜಾತಿ ಪ್ರಮಾಣ ಪತ್ರ ಲಗತ್ತವಾಗಿರದ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ ಹಾಗೂ ಈ ಕುರಿತು ಯಾವುದೇ ಕಾರಣಗಳನ್ನು ತಿಳಿಸಿ ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

5) **ಅರ್ಹತೆ:**

ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪ್ರಸ್ತುತ ಜಾರಿಯಲ್ಲಿರುವ ವೃಂದ ಮತ್ತು ನೇಮಕಾತಿ ಅನುಶಾಸನದ ಪ್ರಕಾರ ನಿಗದಿಪಡಿಸಿರುವ ಅರ್ಹತೆಯನ್ನು ಶೈಕ್ಷಣಿಕ ಅರ್ಹತೆ ಎಂದು ಪರಿಗಣಿಸಲಾಗುವುದು.

6) **ಅರ್ಜಿ ಸಲ್ಲಿಸುವ ವಿಧಾನ:**

i) ಅಭ್ಯರ್ಥಿಗಳು ಅಧಿಸೂಚನೆಯಲ್ಲಿನ ಎಲ್ಲ ಅಂಶಗಳನ್ನು ಓದಿಕೊಂಡ ನಂತರ ಅರ್ಜಿಗಳನ್ನು ಸಂಪೂರ್ಣವಾಗಿ ಭರ್ತಿ ಮಾಡುವುದು. ಸಾಧ್ಯವಾದಷ್ಟು ಮಟ್ಟಿಗೆ ಅರ್ಜಿಯಲ್ಲಿ ನಮೂದಿಸಲಾಗುವ ಅಕ್ಷರಗಳು ಮತ್ತು ಸಂಖ್ಯೆಗಳು ಸ್ಪಷ್ಟವಾಗಿ ಗೋಚರಿಸುವಂತೆ ಇರಬೇಕು ಮತ್ತು ಯಾವುದೇ ರೀತಿಯ ಅಡ್ಡಚಿಹ್ನೆಗಳನ್ನು ಉಪಯೋಗಿಸತಕ್ಕದಲ್ಲ.

ii) ಅರ್ಜಿಯನ್ನು 4 (ನಾಲ್ಕು) ಪ್ರತಿಗಳಲ್ಲಿ ಸಲ್ಲಿಸುವುದು.

iii) ಅರ್ಜಿಗಳನ್ನು ಸಂಪೂರ್ವಾಗಿ ಭರ್ತಿ ಮಾಡಿದ ನಂತರ ಅಭ್ಯರ್ಥಿಗಳು ಎಲ್ಲ ಅಗತ್ಯ ದಾಖಲೆಗಳನ್ನು ಲಗತ್ತಿಸಲಾಗಿದೆಯೇ ಎಂದು ಖಚಿತಪಡಿಸಿಕೊಳ್ಳುವುದು. (ಉದಾಹರಣೆಗೆ ಅಂಕಪಟ್ಟಿಗಳು, ಜನ್ಮ ದಾಖಲೆಗಳು/ಶಾಲೆ ಬಿಟ್ಟ ಬಗ್ಗೆ ಪ್ರಮಾಣ ಪತ್ರ/ನಡತೆ ಪ್ರಮಾಣ ಪತ್ರ ಇತ್ಯಾದಿ). ಅಭ್ಯರ್ಥಿಗಳು ಸಲ್ಲಿಸುವ ದಾಖಲೆಗಳ ನಕಲು ಪ್ರತಿಗಳಿಗೆ ಸ್ವ-ದೃಢೀಕರಣ ಮಾಡಿರಬೇಕು.

iv) ಅರ್ಜಿಗಳನ್ನು ಭರ್ತಿ ಮಾಡಿದ ನಂತರ ಸಂಸ್ಕರಣಾ ವೆಚ್ಚದ ಡಿಮ್ಯಾಂಡ್ ಡ್ರಾಫ್ಟ್ ಅಥವಾ ಚಲನ್ ಅನ್ನು ಲಗತ್ತಿಸಲಾಗಿದಯೇ ಎಂದು ಪರೀಕ್ಷಿಸಿಕೊಳ್ಳುವುದು.

v) ಸಂಪೂರ್ಣವಾಗಿ ಭರ್ತಿ ಮಾಡಲಾದ ಅರ್ಜಿಗಳನ್ನು ಅಭ್ಯರ್ಥಿಗಳು ನೊಂದಾಯಿತ ಅಂಚೆಯ ಮೂಲಕ ಪೋಸ್ಟಟ ಮಾಡಬಹುದು. ಅಥವಾ ನೇರವಾಗಿ ವಿಶ್ವವಿದ್ಯಾಲಯಕ್ಕೆ ಬಂದು ಆಡಳಿತ ಕಟ್ಟಡದಲ್ಲಿರುವ ರೂಮ್ ನಂ. 19 ರ ಅವಕ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇಲ್ಲಿ ದಿನಾಂಕ: **28.11.2023 ರ ಸಾಯಂಕಾಲ 6.00** ಗಂಟೆಯ ಒಳಗಾಗಿ ಅರ್ಜಿಯನ್ನು ಸಲ್ಲಿಸಬಹುದು. ನಿಗದಿತ ದಿನಾಂಕದ ನಂತರ ಸಲ್ಲಿಸಲಾಗುವ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ. ಪೋಸ್ಟ್ ಮುಖಾಂತರ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಅರ್ಜಿಗಳನ್ನು ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ, ಪಾವಟೆನಗರ, ಧಾರವಾಡ-580003 ಇವರಿಗೆ ಕಳುಹಿಸುವುದು. (ಪೋಸ್ಟಲ್ ಡಿಲೇಗೆ ಕೆಯುಡಿ ಯಾವುದೇ ಜವಾಬ್ದಾರಿ ಹೊಂದಿರುವುದಿಲ್ಲ.)

**7) ಇತರೆ ಲಗತ್ತುಗಳು:**

ಅಭ್ಯರ್ಥಿಗಳು ತಮ್ಮ ಅರ್ಜಿ ಮತ್ತು ಇತರೆ ದಾಖಲೆಗಳೊಂದಿಗೆ 28 X 12 ಸೆಂ.ಮಿ. ಅಳತೆಯ ಸ್ವ-ವಿಳಾಸವುಳ್ಳ ಮತ್ತು ಅದಕ್ಕೆ ರೂ.40/- ರ ಅಂಚೆ ಚೀಟಿ ಅಂಟಿಸಿದ ಲಕೋಟೆಯನ್ನು ಲಗತ್ತಿಸಬೇಕು.

**ಅರ್ಜಿ ಸಲ್ಲಿಸಬೇಕಾದ ಹುದ್ದೆಗಳ ವಿವರ ಕೆಳಗಿನಂತೆ ಇರುತ್ತದೆ**

| ಅ.ನಂ | ಹುದ್ದೆಯ ಹೆಸರು | ಹುದ್ದೆಗಳು ಸಂಖ್ಯೆ | | ಮೀಸಲಾತಿ / ವಿಂಗಡನೆ | | | | | |
|---|---|---|---|---|---|---|---|---|---|
| | | | | ಮಹಿಳಾ | ಮಾಜಿ ಸೈನಿಕ | ವಿಶೇಷ ಚೇತನ | ಯೋಜನಾ ನಿರಾಶ್ರಿತರು | ಗ್ರಾಮೀಣ ಅಭ್ಯರ್ಥಿ | ಇತರೆ |
| 1. | ಕರಡು ವಾಚಕರು | ಪ.ಪಂಗಡ | 01 | - | - | - | - | - | 01 |
| 2. | ಬಡಿಗ/ಪೇಂಟರ್ | ಪ.ಪಂಗಡ | 01 | - | - | - | - | - | 01 |
| 3. | ಇಲೆಕ್ಟ್ರೀಷಿಯನ್ | ಪ.ಜಾತಿ | 01 | - | - | - | - | - | 01 |

ಎಲ್ಲ ಹುದ್ದೆಗಳಿಗೂ ಕನ್ನಡ ಭಾಷಾ ಜ್ಞಾನ ಹೊಂದಿರುವುದು ಅವಶ್ಯವಿರುತ್ತದೆ. ಆಯಾ ಹುದ್ದೆಗಳಿಗೆ ನಿಗದಿಪಡಿಸಿದ ವಿದ್ಯಾರ್ಹತೆಯು ಪ್ರಚಲಿತದಲ್ಲಿರುವ ಕರ್ನಾಟಕ ವಿಶ್ವವಿದ್ಯಾಲಯದ ವೃಂದ ಮತ್ತು ನೇಮಕಾತಿ ಅನುಶಾಸನದ ಅನುಸಾರವಾಗಿ ಇರುತ್ತದೆ.

**ಅರ್ಹತೆಗಳು:**

**1) ಕರಡು ವಾಚಕರು (Proof Reader)–1 ಹುದ್ದೆ (ಪ್ರಸಾರಾಂಗ):**

(ವೇತನ ಶ್ರೇಣಿ ರೂ. 27650-650-29600-750-32600-850-36000- 950-39800-1100-45400-1250-52650)

ಅ) ಅಂಗೀಕೃತ ವಿಶ್ವವಿದ್ಯಾಲಯದಿಂದ ಪದವಿ ಪಡೆದಿರಬೇಕು.

ಆ) ಕರಡು ವಾಚಕ ಪರೀಕ್ಷೆಯಲ್ಲಿ ತೇರ್ಗಡೆಹೊಂದಿರಬೇಕು

ಇ) ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಕನ್ನಡವನ್ನು ಒಂದು ಭಾಷೆಯನ್ನಾಗಿ ಅಭ್ಯಸಿಸಿರಬೇಕು.

**2) ಬಡಿಗ ವ ಪೇಂಟರ್ (Carpenter cum Painter)–1 ಹುದ್ದೆ (ಕಟ್ಟಡ ವಿಭಾಗ/ ಕೇಂದ್ರ ಕಾರ್ಯಾಗಾರ) :**

(ವೇತನ ಶ್ರೇಣಿ ರೂ. 21400-500-22400-550-24600-600-27000-650-29600-750-32600-850-36000–

950-39800-1100-42000)

ಡ್ರಾಯಿಂಗ್ ಕ್ರಾಫ್ಟಮನ್‌ಶಿಪ್‌ನಲ್ಲಿ ಪ್ರಮಾಣ ಪತ್ರ ಮತ್ತು 7ನೇ ತರಗತಿಯನ್ನು ಪಾಸಾಗಿರಬೇಕು (Certificate in Drawing Craftsmanship and a Pass in VII Standard)

**3) ಇಲೆಕ್ಟ್ರಿಷಿಯನ್ (Electrician)–1 ಹುದ್ದೆ (ಕಟ್ಟಡ ವಿಭಾಗ/ ಕೇಂದ್ರ ಕಾರ್ಯಾಗಾರ):**

(ವೇತನ ಶ್ರೇಣಿ ರೂ. 23500-550-24600-600-27000-650-29600-750-32600-850-36000-950-39800-1100-

46400-1250-47650)

(ಅ) ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣ.

(ಆ) ಕರ್ನಾಟಕ ಸರ್ಕಾರದಿಂದ ಜರುಗಿಸಲ್ಪಡುವ ಇಲೆಕ್ಟ್ರಿಕಲ್ ಸೂಪರ್‌ವೈಜರ್ ಪರೀಕ್ಷೆಯಲ್ಲಿ ಉತ್ತೀರ್ಣ ಅಥವಾ ತತ್ಸಮಾನವಾಗಿರುವ ವಿದ್ಯಾರ್ಹತೆಯನ್ನು ಹೊಂದಿರಬೇಕು.

(ಇ) ಮೋಟರ್ ಹಾಗೂ ಟ್ರಾನ್ಸಫರ್ಮರ್ ವೈಂಡಿಂಗ್‌ನಲ್ಲಿ ಐದು ವರ್ಷಗಳ ಅನುಭವವನ್ನು ಹೊಂದಿರಬೇಕು.

## ನೇಮಕಾತಿ ಮಾಡುವ ವಿಧಾನ:

ಸರ್ಕಾರಿ ಅಧಿಸೂಚನೆ ಸಂಖ್ಯೆ. No.DPAR 13 SBC 2001, dated: 21-11-2001, ರ ಪ್ರಕಾರ ನೇಮಕಾತಿ ಪ್ರಾಧಿಕಾರ ಮೊದಲಿಗೆ 29 ರಿಂದ 40 ವಯೋಮಾನದ ಅಭ್ಯರ್ಥಿಗಳ ಯಾದಿ ಹಾಗೂ 18 ರಿಂದ 29 ರ ವಯೋಮಾನ ಈ ರೀತಿಯಾಗಿ ಎರಡು ಯಾದಿಗಳನ್ನು ಸಿದ್ಧಪಡಿಸುತ್ತದೆ. ನಂತರ ಅರ್ಹತಾ ಪರೀಕ್ಷೆಯಲ್ಲಿ ಪಡೆದುಕೊಂಡ ಅಂಕಗಳನ್ನು ಪರಿಗಣಿಸಿ ಮೆರಿಟ್ ಆಧಾರದ ಮೇಲೆ 29 ರಿಂದ 40 ವಯೋಮಾನದ ಗುಂಪಿನಲ್ಲಿನ ಅಭ್ಯರ್ಥಿಗಳನ್ನು ಅತೀ ಹೆಚ್ಚಿನ ಅಂಕ ಪಡೆದಿರುವ ಅಭ್ಯರ್ಥಿಯ ಹೆಸರನ್ನು ಮೊದಲಿನಿಂದ ಪ್ರಾರಂಭಿಸಿ ಅತೀ ಕಡಿಮೆ ಅಂಕ ಗಳಿಸಿದ ಅಭ್ಯರ್ಥಿಯ ಹೆಸರನ್ನು ಕೊನೆಯದಾಗಿ ಇರಿಸಿ ಯಾದಿಯನ್ನು ಸಿದ್ಧಪಡಿಸಲಾಗುವುದು. ಸಮತಳ ಮೀಸಲಾತಿ (ಮಹಿಳಾ, ಮಾಜಿ ಸೈನಿಕ, ವಿಶೇಷ ಚೇತನ, ಯೋಜನಾ ನಿರಾಶ್ರಿತರು, ಗ್ರಾಮೀಣ) ಯನ್ನು ಪ್ರಚಲಿತ ಜಾರಿಯಲ್ಲಿರುವ ಸರ್ಕಾರಿ ಆದೇಶದ ಅನುಸಾರ ನಿಗದಿಪಡಿಸಲಾಗಿರುತ್ತದೆ. ಒಂದು ವೇಳೆ 29 ರಿಂದ 40 ರ ವಯೋಮಾನದ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ಅಥವಾ 29 ರಿಂದ 40 ರ ವಯೋಮಾನದಲ್ಲಿ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳ ಪೈಕಿ ಯಾರು ಅರ್ಹರಿಲ್ಲದಿದ್ದಲ್ಲಿ, ಆಗ 18 ರಿಂದ 29 ರ ವಯೋಮಾನದ ಯಾದಿಯಲ್ಲಿರುವ ಅಭ್ಯರ್ಥಿಗಳನ್ನು ಇತರೆ ಅರ್ಹತೆಗಳ ಪೂರೈಕೆಯ ಷರತ್ತಿಗೊಳಪಟ್ಟು ಪರಿಗಣಿಸಲಾಗುವುದು.

ಒಂದು ವೇಳೆ ಇಬ್ಬರು ಅಥವಾ ಅದಕ್ಕೂ ಹೆಚ್ಚಿನ ಅಭ್ಯರ್ಥಿಗಳು ಸಮನಾಗಿ ಅಂಕಗಳನ್ನು ಪಡೆದುಕೊಂಡಿದ್ದರೆ, ಆಗ ಅಂತಹ ಅಭ್ಯರ್ಥಿಗಳ ವಯಸ್ಸಿನ ಆಧಾರದ ಮೇಲೆ ಅಂತಹ ಅಭ್ಯರ್ಥಿಗಳನ್ನು ಮೆರಿಟ್ ಯಾದಿಯಲ್ಲಿ ಇರಿಸಲಾಗುವುದು. (ಹಿರಿಯನಾದವನು ಕಿರಿಯ ವಯಸ್ಸಿನವನಿಗಿಂತ ಮೇಲಿನ ಮೇರಿಟ್ ಸ್ಥಾನ ಪಡೆಯುವನು)

ಸಿದ್ಧಪಡಿಸಿದ ಯಾದಿಯಲ್ಲಿ ಹೆಸರು ಇದೆ ಎಂಬ ಕಾರಣಕ್ಕೆ ನೇಮಕಾತಿ ಆಗಿದೆ ಎಂದು ಅಥವಾ ನೇಮಕಾತಿ ತನ್ನ ಹಕ್ಕು ಎಂದು ಯಾವುದೇ ರೀತಿಯಲ್ಲಿ ಹಕ್ಕನ್ನು ಸ್ಥಾಪಿಸುವಂತಿಲ್ಲ.

## ದುರ್ನಡತೆಗಳು

1) ಈ ನೇಮಕಾತಿಯು ಪ್ರಕ್ರಿಯೆ ಸಂಪೂರ್ಣವಾಗಿ ಪಾರದರ್ಶಕತೆಯಿಂದ ಕೂಡಿದ್ದು, ಅಭ್ಯರ್ಥಿಗಳು ಯಾವುದೇ ರೀತಿಯ ಆಮಿಷಗಳಿಗೆ ಒಳಗಾಗಿ ಯಾವುದೇ ಮಧ್ಯವರ್ತಿಗಳಿಂದ ಪ್ರಭಾವಿತರಾಗಿ ಲಂಚ ನೀಡುವುದು ಅಥವಾ ಬೇರೆ ಅಭ್ಯರ್ಥಿಗಳಿಂದ ಹಣ ಸಂಗ್ರಹಿಸುವುದು ಅಥವಾ ಲಂಚತನವನ್ನು ಉತ್ತೇಜಿಸುವುದು ಕಾನೂನಿನ ರೀತಿಯಲ್ಲಿ ಅಪರಾದವಾಗಿರುತ್ತದೆ. ಒಂದು ವೇಳೆ ಯಾವುದೇ ಅಭ್ಯರ್ಥಿ ಅಥವಾ ಯಾವುದೇ ವ್ಯಕ್ತಿ ಈ ಕೃತ್ಯದಲ್ಲಿ ಬಾಗಿಯಾಗಿರುವುದು ಕಂಡುಬಂದಲ್ಲಿ ಅಂತಹವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕಾನೂನು ರೀತಿಯಲ್ಲಿ ಕ್ರಮ ಜರುಗಿಸಲಾಗುವುದು.
2) ಒಂದು ವೇಳೆ ಅಭ್ಯರ್ಥಿಗಳಿಗೆ ಈ ವಿಷಯವಾಗಿ ಮಧ್ಯವರ್ತಿಗಳು ಸಂಪರ್ಕಿಸಿ ಆಮಿಷ ಒಡ್ಡಿದ್ದಲ್ಲಿ ಅಂತಹ ಅಭ್ಯರ್ಥಿಗಳು ಕೂಡಲೇ ಈ ಬಗ್ಗೆ ತಮ್ಮ ಲಿಖಿತ ದೂರನ್ನು ಸಮರ್ಥನೆಯೊಂದಿಗೆ ಮುಚ್ಚಿದ ಲಕೋಟೆಯಲ್ಲಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಅಥವಾ ವಿಭಾಗದ ಇ-ಮೇಲ್ ವಿಳಾಸ kudparcomplaint@gmail.com ಕ್ಕೆ ಕಳುಹಿಸಲು ತಿಳಿಸಲಾಗಿದೆ. ದೂರುದಾರರ ಹೆಸರು ಮತ್ತು ಇತರೆ ಮಾಹಿತಿಯನ್ನು ಗೌಪ್ಯವಾಗಿಡಲಾಗುವುದು.

**<u>ಸಾಮಾನ್ಯ ಸೂಚನೆಗಳು:</u>**

1) ಈಗಾಗಲೇ ಸರ್ಕಾರಿ ಸೇವೆಯಲ್ಲಿರುವ ಮತ್ತು ಹಳೆಯ ಪಿಂಚಣಿ ಯೋಜನೆಯಲ್ಲಿ ಒಳಪಡುವ ಸರ್ಕಾರಿ ನೌಕರ/ಳು ಈ ಅಧಿಸೂಚನೆಯಲ್ಲಿ ಕಾಣಿಸಿದ ಯಾವುದೇ ಹುದ್ದೆಗೆ ಆಯ್ಕೆಯಾಗಿ ವಿಶ್ವವಿದ್ಯಾಲಯದಲ್ಲಿ ನೇಮಕಾತಿ ಹೊಂದಿದರೂ ಕೂಡ ಅವರನ್ನು ದಿನಾಂಕ: 01.04.2006 ರಿಂದ ಜಾರಿಗೆ ಬಂದಿರುವ ನೂತನ ಪಿಂಚಣಿ ಯೋಜನೆಯಲ್ಲಿ ಪರಿಗಣಿಸಲಾಗುವುದು.
2) ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದಂದು ಆಯಾ ಹುದ್ದೆಗೆ ನಿಗದಿಪಡಿಸಲಾಗಿರುವ ವಿದ್ಯಾರ್ಹತೆಯನ್ನು ಹೊಂದಿರತಕ್ಕದ್ದು. ನಿಗದಿಪಡಿಸಿದ ಅರ್ಹತೆ ಮತ್ತು ವಿದ್ಯಾರ್ಹತೆಯನ್ನು ಹೊಂದದೇ ಇರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಾರದು.
3) ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಪಡೆದುಕೊಂಡಿರುವ ಜಾತಿ ಪ್ರಮಾಣ ಪತ್ರಗಳನ್ನು ಕಡ್ಡಾಯವಾದ ಲಗತ್ತಿಸಬೇಕು. ಅಭ್ಯರ್ಥಿ ವಾಸಿಸುವ ಸ್ಥಳ ಒಳಪಡುವ ಪ್ರದೇಶದ ತಹಶೀಲ್ದಾರರನ್ನು ಜಾತಿ ಪ್ರಮಾಣ ಪತ್ರ ನೀಡುವ ಸಕ್ಷಮ ಪ್ರಾಧಿಕಾರ ಎಂದು ಪರಿಗಣಿಸಲಾಗುವುದು. ಗ್ರಾಮೀಣ, ಮಾಜಿ ಸೈನಿಕ, ವಿಶೇಷ ಚೇತನ, ಯೋಜನಾ ನಿರಾಶ್ರಿತರ ಮೀಸಲಾತಿ ಅಡಿಯಲ್ಲಿ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಪಡೆದುಕೊಂಡಿರುವ ಪ್ರಮಾಣ ಪತ್ರಗಳನ್ನು ಲಗತ್ತಿಸಬೇಕು ಹಾಗೂ ಅಭ್ಯರ್ಥಿಗಳು ಶಾಲೆ ಬಿಟ್ಟ ಪ್ರಮಾಣ ಪತ್ರ ಮತ್ತು ಇತರೆ ಅಗತ್ಯ ದಾಖಲೆಗಳ 4 (ನಾಲ್ಕು) ಪ್ರತಿಗಳ ಅರ್ಜಿಯೊಂದಿಗೆ ಲಗತ್ತಿಸಬೇಕು.
4) ನೇಮಕಾತಿ ಹೊಂದುವ ಅಭ್ಯರ್ಥಿಗಳನ್ನು ಸರ್ಕಾರದ ನಿಯಮಗಳ ಅನುಸಾರ ಪರಿವೀಕ್ಷಣಾ ಅವಧಿಯಲ್ಲಿರಿಸಲಾಗುವುದು ಹಾಗೂ ಅವರ ಕಾರ್ಯಕ್ಷಮತೆಯನ್ನು ಪರಿಗಣಿಸಿ ಖಾಯಂಗೊಳಿಸಲಾಗುವುದು.
5) ಈ ರೀತಿಯಾಗಿ ನೇಮಕಗೊಳ್ಳುವ ಅಭ್ಯರ್ಥಿಗಳನ್ನು ಕರ್ನಾಟಕ ವಿಶ್ವವಿದ್ಯಾಲಯದ ಮುಖ್ಯ ಆವರಣ ಅಥವಾ ಘಟಕ ಮಹಾವಿದ್ಯಾಲಯಗಳು ಅಥವಾ ಸ್ನಾತಕೋತ್ತರ ಕೇಂದ್ರಗಳಾದ ಗದಗ, ಕಾರವಾರ ಇಲ್ಲಿ ಕಾರ್ಯಹೊಂದಾಣಿಕೆ ಮೇರೆಗೆ ಸ್ಥಳಾಂತರಿಸಲಾಗುವುದು.
6) ಅಭ್ಯರ್ಥಿಗಳು ತಮ್ಮ ಇತ್ತೀಚಿನ ಭಾವಚಿತ್ರವನ್ನು ಅರ್ಜಿ ನಮೂನೆಯಲ್ಲಿ ಗೊತ್ತುಪಡಿಸಿದ ಸ್ಥಳದಲ್ಲಿ ಕಡ್ಡಾಯವಾಗಿ ಅಂಟಿಸಬೇಕು. (ನಾಲ್ಕು ಅರ್ಜಿಗಳಿಗೆ)
7) ನೇಮಕಾತಿಗಾಗಿ ನೇರವಾಗಿ ಅಥವಾ ಪರೋಕ್ಷವಾಗಿ ಒತ್ತಡ ಹೇರುವ ಅಥವಾ ಅನ್ಯ ಮಾರ್ಗದಿಂದ ಪ್ರಯತ್ನ ಪಡುವ ಅರ್ಭ್ಯಥಿಗಳನ್ನು ನೇಮಕಾತಿಯಿಂದ ಅನರ್ಹಗೊಳಿಸಲಾಗುವುದು.
8) ತಡವಾಗಿ ಬಂದಂತಹ ಅಥವಾ ಅಪೂರ್ಣವಾಗಿರುವ ಅಥವಾ ನಿಗದಿತ ನಮೂನೆಯಲ್ಲಿರದ ಅಥವಾ ನಾಲ್ಕು ಪ್ರತಿಗಳಿಲ್ಲದ ಅಥವಾ ಸಂಸ್ಕರಣಾ ಶುಲ್ಕ ಭರಿಸದ ಅರ್ಜಿಗಳನ್ನು ಯಾವುದೇ ಹಿಂಬರಹ ನೀಡದೇ ಪರಿಗಣಿಸಲಾಗುವುದಿಲ್ಲ.
9) ಅಧಿಸೂಚನೆಯಲ್ಲಿ ಕಾಣಿಸಿದ ಹುದ್ದೆಗಳನ್ನು ಭರ್ತಿ ಮಾಡುವ ಅಥವಾ ಭರ್ತಿ ಮಾಡದೇ ಇರುವ ಹಕ್ಕು ವಿಶ್ವವಿದ್ಯಾಲಯಕ್ಕೆ ಇರುತ್ತದೆ.
10) ಅರ್ಜಿ ಶುಲ್ಕ ಮತ್ತು ಸಂಸ್ಕರಣಾ ಶುಲ್ಕ ರೂ.700/-ಗಳನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ.
11) ಈಗಾಗಲೇ ಸೇವೆಯಲ್ಲಿರುವಂತಹ ಅಭ್ಯರ್ಥಿಗಳು ಸಮುಚಿತ ಮಾರ್ಗದ ಮೂಲಕ ತಮ್ಮ ಅರ್ಜಿಗಳನ್ನು ಸಲ್ಲಿಸುವುದು.
12) ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಹೊರತುಪಡಿಸಿ ಬೇರೆ ಯಾವುದೇ ವರ್ಗದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಾರದು.
13) ಅಭ್ಯರ್ಥಿಗಳು ಲಕೋಟೆಯ ಮೇಲೆ ಯಾವ ಹುದ್ದೆಗೆ ಅರ್ಜಿ ಸಲ್ಲಸುವರೋ ಆ ಹುದ್ದೆಗಾಗಿ ಅರ್ಜಿ ಎಂದು ದಪ್ಪ ಅಕ್ಷರಗಳಲ್ಲಿ ಸ್ಪಷ್ಟವಾಗಿ ನಮೂದಿಸಬೇಕು.
14) ಒಂದಕ್ಕಿಂತ ಹೆಚ್ಚಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಬಯಸುವ ಅಭ್ಯರ್ಥಿಗಳು ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಸಬೇಕು ಹಾಗೂ ಪ್ರತ್ಯೇಕವಾಗಿ ಅರ್ಜಿ ಶುಲ್ಕ ಮತ್ತು ಸಂಸ್ಕರಣಾ ಶುಲ್ಕವನ್ನು ಭರಿಸಬೇಕು.
15) ಅಭ್ಯರ್ಥಿಗಳು ಈ ಜಾಹೀರಾತನ್ನು ಸಂಪೂರ್ಣವಾಗಿ ಓದಿಕೊಂಡು ಯಾವ ಮೀಸಲಾತಿ ಅಡಿಯಲ್ಲಿ ಅರ್ಜಿಗಳನ್ನು ಅಹ್ವಾನಿಸಲಾಗಿದೆಯೋ ಆ ವರ್ಗದ ಅರ್ಹ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಬೇಕು. ಒಂದು ವೇಳೆ ನಿಗದಿಪಡಿಸಿದ ಮೀಸಲಾತಿ ಅಡಿಯಲ್ಲಿ ಅಭ್ಯರ್ಥಿಗಳು ಲಭ್ಯವಿಲ್ಲದೇ ಇದ್ದಲ್ಲಿ ಅಥವಾ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಅರ್ಹತೆ ಹೊಂದಿರದೆ ಇದ್ದಲ್ಲಿ ಅನ್ಯ ವರ್ಗ ಅಥವಾ ಮೀಸಲಾತಿಯ ಅಭ್ಯರ್ಥಿಗಳನ್ನು ಪರಿಗಣಿಸಲಾಗುವುದಿಲ್ಲ ಅಥವಾ ಮೀಸಲಾತಿಯನ್ನು ಬದಲಾಯಿಸಲಾಗುವುದಿಲ್ಲ.
16) ಕರ್ನಾಟಕ ರಾಜ್ಯದ ನಿವಾಸಿಯಾಗಿರುವ ಮತ್ತು ಕರ್ನಾಟಕದಲ್ಲಿ ವ್ಯಾಸಾಂಗ ಮಾಡಿರುವ ಅಭ್ಯರ್ಥಿಗಳು ಮಾತ್ರ ಬ್ಯಾಕಲಾಗ್ ಅಡಿಯಲ್ಲಿ ನೇಮಕಾತಿಗಾಗಿ ಅರ್ಜಿ ಸಲ್ಲಿಸಲು ಅವಕಾಶವಿದೆ. ಹೊರರಾಜ್ಯದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.

ಕುಲಸಚಿವರು

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ